# ಮೌನವಾದ ಪಿಸುಮಾತು...

ನಾನೊಬ್ಬರನ್ನು ಪ್ರೀತಿಸಿದ್ದೆ. ಈ ವಿಚಾರವನ್ನು ಯಾರಲ್ಲಿಯೂ ಹೇಳಿಕೊಂಡಿರಲಿಲ್ಲ. ಕಾಣದಂತೆ ಮನದಾಳದಲ್ಲಿ ಬೆಳೆದ ಮೌನ ಪ್ರೀತಿ. ಪ್ರತಿದಿನ ಅವರನ್ನು ನೋಡಿದಾಗ ಹೃದಯದಲ್ಲಿ ಏನೋ ಹೇಳಬೇಕೆನ್ನುವ ತವಕ, ಆದರೆ ತುಟಿಗಳು ಮೌನವಾಗಿಯೇ ಉಳಿಯುತ್ತಿದ್ದವು. ಮಾತುಗಳಿಗಿಂತ ಭಾವನೆಗಳು ದೊಡ್ಡವಾಗಿದ್ದವು, ಅದಕ್ಕಾಗಿಯೇ ನಾನು ಮಾತುಗಳ ಬದಲು ಪತ್ರವನ್ನು ಆಯ್ಕೆ ಮಾಡಿಕೊಂಡೆ.


ಆ ಪ್ರೇಮಪತ್ರದಲ್ಲಿ ನಾನು ನನ್ನ ಮನದಾಳದ ಎಲ್ಲ ಮಾತುಗಳನ್ನು ಸುರಿಸಿದ್ದೆ. 'ನೀವು ನನ್ನ ದಿನಗಳ ನಗು, ನನ್ನ ಮೌನದ ಕಾರಣ' ಎಂದು ಆರಂಭಿಸಿ 'ನಿಮ್ಮ ಒಂದು ನೋಟವೇ ನನ್ನ ಹೃದಯಕ್ಕೆ ಹಬ್ಬ' ಎಂದು ಬರೆಯುವ ತನಕ, ಪ್ರತಿಯೊಂದು ಸಾಲು ನನ್ನ ಹೃದಯದ ಸ್ಪಂದನೆಯೇ ಆಗಿತ್ತು. ಆ ಪತ್ರದಲ್ಲಿ ನನ್ನ ಜೀವ ತುಂಬಿತ್ತು.

ಪತ್ರವನ್ನು ಬರೆದ ದಿನ ಒಂದು ವಿಚಿತ್ರ ಸಂತೋಷ. ಇದನ್ನು ಕೊಟ್ಟಾಗ ಏನು ಭಾವಿಸುವರೋ? ನನ್ನ ಪ್ರೀತಿಯನ್ನು ಅರ್ಥಮಾಡಿಕೊಳ್ಳುತ್ತಾರೋ, ಇಲ್ಲವೋ? ಸಾವಿರಾರು ಪ್ರಶ್ನೆಗಳು ಮನಸ್ಸಿನಲ್ಲಿ ತೇಲುತ್ತಿದ್ದವು. ಅದೇ ಸಮಯ, ಭಯವೂ ಇತ್ತು.

ದಿನಗಳು ಕಳೆದವು. ಪತ್ರ ನನ್ನ ಕೈಯಲ್ಲೇ ಉಳಿಯಿತು. ಕೊಡಬೇಕೆಂದರೆ ಧೈರ್ಯ ಸಾಲಲಿಲ್ಲ, ದಿನವೂ ಪತ್ರ ಕೊಡಲು ಹೋಗಿ ಧೈರ್ಯ ಸಾಕಾಗದೆ ಹಿಂತಿರುಗಿ ಬಂದು ಬೇಸರ ಮಾಡಿಕೊಳ್ಳುತ್ತಿದ್ದೆ. ನನ್ನ ಎದುರಲ್ಲೇ ಇದ್ದರೂ, ಪತ್ರ ನನ್ನ ಚೀಲದೊಳಗೆ ಮೌನವಾಗಿ ಮಲಗಿತ್ತು. ನನ್ನ ಮಾತುಗಳಂತೆ ಅದೂ ಮಾತನಾಡಲಾಗದ ಸ್ಥಿತಿಯಲ್ಲಿ.

ಒಂದು ದಿನ ತಿಳಿಯಿತು, ಅವರ ದಾರಿಯೇ ಬೇರೆ, ನನ್ನ ದಾರಿಯೇ ಬೇರೆ ಎಂಬುದು. ನನ್ನ ಪ್ರೀತಿ ಸತ್ಯವಾಗಿದ್ದರೆ, ಅದು ಸ್ವಾರ್ಥವಾಗಿರಬಾರದು ಎಂಬುದು ನನ್ನ ನಿರ್ಧಾರವಾಗಿತ್ತು. ಹೀಗಾಗಿ ನಾ ಬರೆದಿದ್ದ ಪತ್ರವನ್ನು ಕೊಡದಿರುವುದೇ ನನ್ನ ಗೌರವ ಎಂದು ಭಾವಿಸಿದೆ. ಇಂದಿಗೂ ಆ ಪತ್ರ ನನ್ನ ಬಳಿ ಇದೆ. ಕೊಡಲಾಗದ ಆ ಪ್ರೇಮಪತ್ರ ನನ್ನ ಜೀವನಕ್ಕೆ ಒಂದು ಪಾಠ ಕಲಿಸಿತು. ಪ್ರೀತಿ ಎಂದರೆ ಪಡೆಯುವುದು ಮಾತ್ರವಲ್ಲ, ಬಿಟ್ಟುಕೊಡುವುದೂ ಹೌದು.

—ಗಾಯತ್ರಿ ಎಸ್.ಎನ್., ಶಿವಮೊಗ್ಗ



# ಹೊರಳಿತ್ತು ಬದುಕಿನ ಹಾದಿ

ಹಿರೇಹಡಗಲಿಯ ಸಣ್ಣ ಬೀದಿಗಳಲ್ಲಿ ನನ್ನಲ್ಲಿ ಪ್ರೀತಿ ಚಿಗುರಿತ್ತು. ಅವಳ ಹೆಸರು ಉಚ್ಚರಿಸಿದರೆ ಹೃದಯದೊಳಗೆ ಗಂಟೆ ಬಡಿದಂತೆ ಧ್ವನಿಯಾಗುತ್ತಿದ್ದ ದಿನಗಳವು. ಅವಳಿಗೆ ನಾನು ಬರೆದ ಪ್ರೇಮಪತ್ರ ಇಂದಿಗೂ ಬಟವಾಡೆಯಾಗದೆ ಉಳಿದಿದೆ. ಆ ಪತ್ರದಲ್ಲಿ ಕೇವಲ ಪದಗಳಿರಲಿಲ್ಲ; ನನ್ನ ಉಸಿರು, ನಿದ್ದೆಯಿಲ್ಲದ ರಾತ್ರಿ, ಅವಳನ್ನು ಕಾಣುವ ನಿರೀಕ್ಷೆಯಲ್ಲಿ ಕಂಪಿಸಿದ್ದ ಕೈಗಳಿದ್ದವು. ಹಿರೇಹಡಗಲಿಯ ಕೆರೆ ತೀರದಲ್ಲಿ ಕುಳಿತು, ಅವಳ ನೆನಪಿನಲ್ಲಿ ಅಕ್ಷರಗಳನ್ನು ಒತ್ತಿ ಬರೆಯುವಾಗ, ಪ್ರೀತಿಯೊಂದಿಗೆ ಭಯವೂ ಆಗಿತ್ತು, ಪ್ರೀತಿಯನ್ನು ಕಾಗದಕ್ಕೆ ಇಳಿಸಿದ್ದೆ. ಶುದ್ಧವಾದ ತೀವ್ರ ಪ್ರೀತಿ ಅಲ್ಲಿ ತುಂಬಿತ್ತು. ಆ ಪತ್ರ ಕೈ ಬದಲಿಸುವ ಮುನ್ನವೇ ಬದುಕಿನ ದಾರಿ ಹೊರಳಿತು. ಅವಳು ದೂರದ ಬದುಕಿಗೆ ಹೊರಟಳು; ನಾನು ಇಲ್ಲಿ ಉಳಿದೆ. ಹಳೆಯ ಪುಸ್ತಕಗಳ ನಡುವೆ ಆ ಪತ್ರ ಮಾತ್ರ ಇನ್ನೂ ಉಸಿರಾಡುತ್ತಿದೆ. ಹೇಳಲಾಗದೆ ಉಳಿದ ಪ್ರೀತಿಯೇ ಶಾಶ್ವತವಾಯಿತು.

—ಆರ್. ಶಿವರಾಮ ಸಂಡೂರು

# ಕಾಗದದೊಳಗೇ ಉಳಿದ ಪ್ರೀತಿ

ನೆನಪುಗಳ ಪುಟ ತೆರೆದಾಗಲೆಲ್ಲ ನೀನೇ ಎದುರು ನಿಲ್ಲುತ್ತೀಯೆ. ಅಂದು ಕಲಬುರಗಿಯ ಆ ಸುಡುವ ಬಿಸಿಲಿನಲ್ಲಿ, ಶರಣಬಸವೇಶ್ವರ ಗುಡಿಯ ಆವರಣದಲ್ಲಿ ಕುಳಿತು ನಿನಗಾಗಿ ಒಂದು ಸುದೀರ್ಘ ಪತ್ರ ಬರೆದಿದ್ದೆ. ನನ್ನ ಬದುಕಿನ ಪ್ರತಿ ಹಂತದಲ್ಲೂ ನಿನ್ನ ಸಾಂಗತ್ಯ ಬೇಕೆಂದು ಹಂಬಲಿಸಿ ಬರೆದ ಆ ಸಾಲುಗಳಲ್ಲಿ ಅದೆಷ್ಟು ಕನಸುಗಳಿದ್ದವು!

ಆದರೆ, ಸಂಪ್ರದಾಯದ ಬೇಲಿ ಮತ್ತು ಮರ್ಯಾದೆಯ ಭಯ ನನ್ನ ಕೈಗಳನ್ನು ಕಟ್ಟಿಹಾಕಿದ್ದವು. ಪತ್ರವನ್ನು ನಿನ್ನ ಕೈಗೆ ಕೊಡಲು ಬಂದಾಗಲೆಲ್ಲ, ಮಾತುಗಳು ಗಂಟಲಲ್ಲೇ ಸಿಲುಕುತ್ತಿದ್ದವು. ಕೊನೆಗೂ ಆ ಪತ್ರ ನಿನ್ನನ್ನು ಸೇರಲಾಗಲೇ ಇಲ್ಲ; ಬದಲಾಗಿ ನನ್ನ ಹಳೆಯ ಡೈರಿಯ ನಡುವೆ ಮೌನವಾಗಿ ಅಡಗಿ ಕುಳಿತಿತು. ಇಂದು ಆ ಕಾಗದ ಹಳದಿಯಾಗಿರಬಹುದು, ಆದರೆ ನಿನ್ನ ಮೇಲಿದ್ದ ಆ ಅಪ್ಪಟ ಅನುರಾಗ ಇಂದಿಗೂ ಹಸಿರಾಗಿದೆ. ಕೆಲವು ಪ್ರೇಮಕಥೆಗಳು ಮುಕ್ತಾಯ ಕಾಣದಿದ್ದರೇನೇ ಚೆಂದವೇನೋ... ಆ ಪತ್ರ ಬಟವಾಡೆಯಾಗದಿದ್ದರೂ, ನನ್ನೆದೆಯ ಗೂಡಿನಲ್ಲಿ ಇಂದಿಗೂ ಸುರಕ್ಷಿತವಾಗಿದೆ.

—ಮಲ್ಲಿಕಾರ್ಜುನ ಬಿರಾದಾರ, ಕಲಬುರಗಿ



## ಬದುಕಿನ ಪರೀಕ್ಷೆ!

ಶಾಲಾ ಕಾಲೇಜಿನಲ್ಲಿ ನಮ್ಮ ಬುದ್ಧಿಮಟ್ಟ, ಜಾಣ್ಮೆಯನ್ನು ಮೌಲ್ಯಮಾಪನ ಮಾಡಲು ಪರೀಕ್ಷೆಗಳಿದ್ದಂತೆ, ಜೀವನದಲ್ಲಿಯೂ ನಮ್ಮ ಸಹನೆ, ಸಂಯಮ ಅಳೆಯಲು ಕೆಲವು ಸಂದರ್ಭಗಳು ಪರೀಕ್ಷೆಗಳಂತೆ ಬರುತ್ತವೆ. ಅನಿರೀಕ್ಷಿತವಾಗಿ ಒದಗುವ ಈ ಸಂದರ್ಭಗಳು ನಮ್ಮ ಬದುಕನ್ನು ಒರೆಗೆ ಹಚ್ಚುವುದಲ್ಲದೆ ನಮ್ಮ ಅಂತಃಶಕ್ತಿಯನ್ನೂ ಪರಿಚಯಿಸುತ್ತವೆ. ಹಿಂದೆಂದಿಗಿಂತಲೂ ಗಟ್ಟಿಯಾಗಿ ನಿಲ್ಲುವಂತೆ ಪ್ರೇರೇಪಿಸುತ್ತವೆ. ಇದುವರೆಗೂ ನಮಗೇ ಗೊತ್ತಿಲ್ಲದ ನಮ್ಮ ಕ್ಷಮತೆಯನ್ನು ತೆರೆದಿಡುತ್ತವೆ. ಊಹಿಸದಿರುವ ರೀತಿಯಲ್ಲಿ ಜೀವನದ ದಿಕ್ಕನ್ನೇ ಬದಲಾಯಿಸಿರುತ್ತವೆ. ಎಲ್ಲರ ಜೀವನದಲ್ಲಿಯೂ ಒಂದಲ್ಲಾ ಒಂದು ಬಾರಿ ಇಂಥ ಪರೀಕ್ಷೆ ಎದುರಾಗಿಯೇ ಇರುತ್ತದೆ. ಆ ಪರೀಕ್ಷೆ ಜೀವನಕ್ಕೆ ಅನಿರೀಕ್ಷಿತ ಗೆಲುವು, ತಿರುವನ್ನೇ ನೀಡಿರುತ್ತದೆ. ಹಾಗೆಯೇ ನಿಮ್ಮ ಬದುಕಿನಲ್ಲಿ ನಿಮಗೆ ಪರೀಕ್ಷಾ ಸಮಯ ಅನಿಸಿದ್ದು ಯಾವಾಗ? ಅದು ನಿಮ್ಮನ್ನು ಗೆಲ್ಲಿಸಿದ ಬಗೆ ಎಂಥದ್ದು? ನಿಮ್ಮ ಅನುಭವಗಳನ್ನು 'ಸುಧಾ'ದೊಂದಿಗೆ ಹಂಚಿಕೊಳ್ಳಿ. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಗಳ ಮಿತಿಯಲ್ಲಿರಲಿ. ಕೊನೆಯ ದಿನಾಂಕ **ಮಾರ್ಚ್** 12. ಇಮೇಲ್– **editorsu@sudha.co.in**